**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 11.02.2025**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ವಿ.ಎನ್. ಪ್ರತಿವಾದಿ ಪರ ವಕೀಲರಿಂದ**

ದಿನಾಂಕ 09.05.1979 ರ ನೋಂದಾಯಿತ ಉಯಿಲು ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಡಿ–1** ಎಂದು ಗುರುತಿಸಲಾಯಿತು.

ಆದುದರಿಂದ, ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲು : ಶ್ರೀ ಎಂ.ಕೆ.ಎ. ವಾದಿ ಪರ ವಕೀಲರಿಂದ**

ಸ.ನಂ.176 ರ ಸಂಬಂಧ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ. ಸದರಿ ಜಮೀನಿನಲ್ಲಿ ನಾನೇ ಬೆಳೆ ಇಡುತ್ತಿದ್ದೇನೆ. ವಾದಿಯು ಸದರಿ ಜಮೀನನ್ನು ವೆಂಕಟರಾಮಪ್ಪರವರಿಂದ ಖರೀದಿಸಿದ್ದಾರೆ. ಸಾಕ್ಷಿಯು ಮುಂದುವರೆದು ವೆಂಕಟರಾಮಪ್ಪನಿಗೂ ಹಾಗೂ ಸ.ನಂ.176/3 ರ ಜಮೀನಿಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ವೆಂಕಟರಾಮಪ್ಪ ಜಮೀನನ್ನು ಮಾರಿದ ನಂತರ ವೆಂಕಟರಾಮಪ್ಪ ಮತ್ತು ನನ್ನ ನಡುವೆ ತಹಶೀಲ್ದಾರ್ ನ್ಯಾಯಾಲಯದಲ್ಲಿ ಪ್ರಕರಣ ನಡೆದಿತ್ತು ಎಂದರೆ ಸರಿಯಲ್ಲ. ವಾದಿಯು ಕ್ರಯಪತ್ರದ ಮೇಲೆ ಖಾತೆ ಕೇಳಿ ಅರ್ಜಿ ಸಲ್ಲಿಸಿದಾಗ ನಾನು ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿಯು ಸ್ವತಃ ನಾವು ಬೆಂಗಳೂರಿನಲ್ಲಿದ್ದು, ಯಾರೋ ಬಂದು ಸಹಿ ಹಾಕಲು ತಿಳಿಸಿದ್ದು, ನಾನು ಸಹಿ ಹಾಕಿದ್ದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನಗೆ ಸೇರಿದ್ದು ಎಂದು ನಾನು ಖಾತೆ ಆಗುವುದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದು, ತದ ನಂತರ ತಹಶೀಲ್ದಾರ್ ರವರು ಆದೇಶ ಮಾಡಿ ವಾದಿಯ ಹೆಸರಿಗೆ ಖಾತೆ ಮಾಡಲು ದಿನಾಂಕ 07.08.2009 ರಂದು ಆದೇಶ ಮಾಡಿದ್ದರು ಎಂದರೆ ಸರಿ. ನಂತರ ಪಹಣಿಯು ವಾದಿಯ ಹೆಸರಿಗೆ ಬಂದಿದೆ ಎಂದರೆ ಅದು ಬೋಗಸ್ ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ಪಹಣಿ

ಬಂದಿರುವುದನ್ನು ನಾನು ನೋಡಿಯೇ ಇರುವುದಿಲ್ಲ. ವಾದಿಯು ಖರೀದಿಸಿದ ದಿನದಿಂದ ಸದರಿ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಾ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಾತನಾದ ಯಲ್ಲಪ್ಪರವರು 1979 ರಲ್ಲಿ ನನ್ನ ಪರವಾಗಿ ಉಯಿಲು ಬರೆದಿದ್ದಾರೆ. ಆ ರೀತಿ ಉಯಿಲು ಬರೆದಿರುವ ವಿಚಾರ ನನಗೆ ಸುಮಾರು 15 ವರ್ಷಗಳ ಹಿಂದೆಯೇ ತಿಳಿದಿತ್ತು. ನನ್ನ ತಾತ ಮೃತರಾಗಿ 35 ವರ್ಷಗಳಾಗಿವೆ. ನಾನು ಮರಣ ಶಾಸವನ್ನು ಆಧರಿಸಿ ಪ್ರೊಬೇಟ್ ಪಡೆದಿಲ್ಲ. ಮರಣ ಶಾಸನ ಸಂಬಂಧ ನಾನು ದಾವೆ ಸಲ್ಲಿಸಿಲ್ಲ, ಸುಮಾರು 15 ವರ್ಷಗಳ ಹಿಂದೆಯೇ ಮರಣಶಾಸನವು ನನಗೆ ಸಿಕ್ಕಿತ್ತು, ಆದರೆ ನಾನು ದಾವೆ ಸಲ್ಲಿಸಲಿಲ್ಲ ಎಂದು ನುಡಿಯುತ್ತಾರೆ. 2009 ರಿಂದ ವಾದಿಯ ಹೆಸರಿಗೆ ಪಹಣಿ ಇದ್ದು ಅದನ್ನು ರದ್ದುಪಡಿಸಲು ನಾನು ಅರ್ಜಿ ಸಲ್ಲಿಸಿರುವುದಿಲ್ಲ. ನನಗಾಗಲೀ ಅಥವಾ ನಂಜುಂಡಪ್ಪರವರಿಗಾಗಲೀ ದಾವಾ ಸ್ವತ್ತಿನಲ್ಲಿ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ದಾವಾ ಸ್ವತ್ತಿನಲ್ಲಿ ಹಕ್ಕಿಲ್ಲದಿದ್ದರೂ ಸಹ ವಾದಿಯ ದಾವಾ ಸ್ವತ್ತಿನಲ್ಲಿನ ಸ್ವಾಧೀನಕ್ಕೆ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.